# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 710 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.12.2023 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಒಟ್ಟು ಪಡಿತರ ಕುಟುಂಬಗಳ ಸಂಖ್ಯೆ ಎಷ್ಟು;</td><td rowspan="2">ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಒಟ್ಟು ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ.<br><br>
<table>
<tr><th></th><th>ಕಲಬುರಗಿ</th><th>ಯಾದಗಿರಿ</th></tr>
<tr><td>ಅಂತ್ಯೋದಯ ಅನ್ನ ಯೋಜನೆ</td><td>62605</td><td>29334</td></tr>
<tr><td>ಆದ್ಯತಾ</td><td>506758</td><td>240209</td></tr>
<tr><td>ಆದ್ಯತೇತರ</td><td>115577</td><td>17591</td></tr>
<tr><td>ಒಟ್ಟು</td><td>6,84,940</td><td>2,87,134</td></tr>
</table>
<br>• ಕಲಬುರಗಿ ಜಿಲ್ಲೆಯಲ್ಲಿ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿ ವಿಲೇವಾರಿಗೆ ಬಾಕಿ ಅರ್ಜಿಗಳ ಸಂಖ್ಯೆ 17259<br>• ಯಾದಗಿರಿ ಜಿಲ್ಲೆಯಲ್ಲಿ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿ ವಿಲೇವಾರಿಗೆ ಬಾಕಿ ಅರ್ಜಿಗಳ ಸಂಖ್ಯೆ 6412</td></tr>
<tr><td>ಆ</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅಂತ್ಯೋದಯ, ಬಿ.ಪಿ.ಎಲ್/ಎ.ಪಿ.ಎಲ್ ಪಡಿತರ ಚೀಟಿ ಪಡೆದಿರುವ ಕುಟುಂಬಗಳ ಸಂಖ್ಯೆ ಎಷ್ಟು; ಪಡಿತರ ಚೀಟಿ ಹೊಂದಿರದೇ ಇರುವ ಕುಟುಂಬಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)</td></tr>
<tr><td>ಇ</td><td>ಸದರಿ ಜಿಲ್ಲೆಗಳಲ್ಲಿ ಹೊಸದಾಗಿ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಲು ಮತ್ತು ಪಡಿತರ ಚೀಟಿಗೆ ಹೆಸರನ್ನು ಸೇರ್ಪಡೆ/ಬದಲಾವಣೆ ಮಾಡಲು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ಅವಕಾಶ ಕಲ್ಪಿಸಲಾಗುವುದು;</td><td>ಸದರಿ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯಾದ್ಯಂತ ಹೊಸ ಪಡಿತರ ಚೀಟಿಗಳನ್ನು ವಿತರಿಸಲು ಬಾಕಿ ಇರುವ 2,95,986ರಡಿ ಆದ್ಯತಾ ಪಡಿತರ ಚೀಟಿಗಳ ವಿಲೇವಾರಿಗೆ ಆದೇಶಿಸಲಾಗಿರುತ್ತದೆ. ಅದರಂತೆ ಈಗಾಗಲೇ 19,889 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.<br><br>ಆಹಾರ ದತ್ತಾಂಶವನ್ನು ನಿರ್ವಹಿಸುತ್ತಿರುವ ಸರ್ವರ್ ಗಳಿಂದ ಮತ್ತು ಆಹಾರ ಅಪ್ಲಿಕೇಶನ್ ನಿಂದ ಕೇಂದ್ರ ಸರ್ಕಾರಕ್ಕೆ ಪ್ರತಿ ತಿಂಗಳು ಪಡಿತರ ಚೀಟಿಗಳ ವಿವರ ಮತ್ತು ವಿತರಣಾ ಡೇಟಾವನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು , ಪ್ರತಿ ಮಾಹೆ ಆನ್‌ಲೈನ್ ಮುಖಾಂತರ ಪಡಿತರ ಹಂಚಿಕೆಯನ್ನು</td></tr>
</table>

| | | |
|---|---|---|
| | | ಜನರೇಟ್ ಮಾಡಲು , ಮತ್ತು ಪ್ರತಿ ಮಾಹೆಯ ಪಡಿತರ ವಿತರಣೆ POS ಮುಖಾಂತರ ಮಾಡಲು ಹಾಗೂ ಸರ್ವರ್ ಬಳಕೆಯಾಗುತ್ತಿದೆ. ಈ ಕಾರಣಗಳಿಂದಾಗಿ ಸರ್ವರ್ ಮೇಲೆ ಹೆಚ್ಚಿನ ಒತ್ತಡ ಇರುತ್ತದೆ. ಆದಾಗ್ಯೂ ಪ್ರತಿ ಮಾಹೆ 1 ರಿಂದ 10 ನೇ ತಾರೀಖಿನವರೆಗೆ ಪಡಿತರ ಚೀಟಿ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br>ಹೆಚ್ಚಾದ ಕಾರ್ಯದೊತ್ತಡದ ಕಾರಣದಿಂದ ಆಹಾರ ತಂತ್ರಾಂಶದ ಸರ್ವರ್‌ಗಳನ್ನು ಎನ್.ಐ.ಸಿ ಯಿಂದ ಕೆ.ಎಸ್ .ಡಿ.ಸಿ(Karnataka State Data Centre) ಗೆ ವರ್ಗಾಯಿಸಲಾಗುತ್ತಿದ್ದು, ಈ ಸಂಬಂಧದ ಆಹಾರ ತಂತ್ರಾಂಶದ Migration ಕಾರ್ಯವು ಪ್ರಗತಿಯಲ್ಲಿರುತ್ತದೆ. ಎನ್. ಐ. ಸಿ ಯಿಂದ ಕೆ.ಎಸ್.ಡಿ.ಸಿ ಗೆ Migration ಕಾರ್ಯ ಪೂರ್ಣಗೊಂಡ ನಂತರ ಪಡಿತರ ಚೀಟಿಯಲ್ಲಿನ ಹೆಸರು ಸೇರ್ಪಡೆ/ತಿದ್ದುಪಡಿ ಬಗ್ಗೆ ನಿರಂತರವಾಗಿ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತದೆ. |
| ಈ | ಪಡಿತರ ಚೀಟಿಗೆ ಅರ್ಜಿ ಸಲ್ಲಿಸಿ ಪಡಿತರ ಚೀಟಿ ವಿತರಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ವಿವಿಧ ಕಾರಣಗಳಿಂದ ರದ್ದಾದ/ಅಮಾನತ್ತಾದ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; | **ಕಲಬುರಗಿ ಜಿಲ್ಲೆ:**<br>ಪಡಿತರ ಚೀಟಿ ವಿತರಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ: 17259 ಮತ್ತು ವಿವಿಧ ಕಾರಣಗಳಿಂದ ರದ್ದಾದ/ಅಮಾನತ್ತಾದ ಪಡಿತರ ಚೀಟಿಗಳ ಸಂಖ್ಯೆ: 3657<br><br>**ಯಾದಗಿರಿ ಜಿಲ್ಲೆ:**<br>ಪಡಿತರ ಚೀಟಿ ವಿತರಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ: 6412 ಮತ್ತು ವಿವಿಧ ಕಾರಣಗಳಿಂದ ರದ್ದಾದ/ಅಮಾನತ್ತಾದ ಪಡಿತರ ಚೀಟಿಗಳ ಸಂಖ್ಯೆ: 206 |

ಸಂಖ್ಯೆ: ಆನಾಸ **271 ಡಿಆರ್‌ಎ 2023**

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು